**<u>ಟಿ.ನರಸೀಪುರದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ</u>**

**<u>ಸಿ.ಸಿ. ನಂ.1269/2024</u>**

ಪಿರ್ಯಾದುದಾರರು : ಶ್ರೀ ರಾಜಣ್ಣ,
ಬಿನ್ ಲೇಟ್ ಚಂದ್ರಪ್ಪ,
ಸುಮಾರು 53 ವರ್ಷ,
ವಾಸಃ ಬೆನಕನಹಳ್ಳಿ ಗ್ರಾಮ,
ಸೋಸಲೆ ಹೋಬಳಿ,
ಟಿ.ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

-ವಿರುದ್ಧ-

ಆರೋಪಿ : ಶ್ರೀ ಮೊಹಮ್ಮದ್ ಸಲ್ಮಾನ್,
ಬಿನ್ ಮೊಹಮ್ಮದ್ ಜಿಕ್ರುಲ್ಲಾ,
ಸುಮಾರು 42 ವರ್ಷ,
ವಾಸಃ ಅಬ್ರರಿಯಾ ಮಸೀದಿ ರಸ್ತೆ,
ಗರ್ಗೇಶ್ವರಿ ಗ್ರಾಮ,
ಕಸಬಾ ಹೋಬಳಿ ಮತ್ತು ಅಂಚೆ,
ತಲಕಾಡು, ಟಿ.ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ಭಾ ದಂ ಪ್ರ ಸಂ ಕಲಂ.313 ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>**

ಪ್ರ:1: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉ:

ಪ್ರ:2: ಫ್ರಾಸಾ-1 ಶ್ರೀ ರಾಜಣ್ಣ, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ದಿನಾಂಕ 09.05.2024 ರಂದು ರೂ.8,00,000/- ಹಣವನ್ನು ನಿಮ್ಮ ದರದ್ದು ನಿಮಿತ್ತ ಅಂದರೆ ನಿಮ್ಮ ಕೌಟುಂಬಿಕ ಕಾನೂನಿನ ಅವಶ್ಯಕತೆಗಾಗಿ, ಲಾರಿ ರಿಪೇರಿ ಖರ್ಚಿಗಾಗಿ ಮತ್ತು ಮನೆ ನಿರ್ಮಾಣ ಮಾಡಲು ಮಾಡಿದ್ದ ಸಾಲ ತೀರಿಸುವ ಸಲುವಾಗಿ ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು ಎರಡು ತಿಂಗಳ ಒಳಗಾಗಿ ಹಿಂದಿರುಗಿಸುವುದಾಗಿ ಒಪ್ಪಿಕೊಂಡಿದ್ದು, ಅದೇ ದಿನ ಸದರಿ ಸಾಲದ ಮರುಪಾವತಿಗಾಗಿ ರೂ.8,00,000/- ರಂತೆ ದಿನಾಂಕ 09.07.2024 ರ ಮುಂದಿನ ದಿನಾಂಕವನ್ನು ನಮೂದಿಸಿದ ನಿಮ್ಮ ಬ್ಯಾಂಕ್ ಖಾತೆಯುಳ್ಳ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾಲೇಜ್ ರಸ್ತೆ, ಟಿ.ನರಸೀಪುರ ಶಾಖೆಯ ಚೆಕ್ ನಂ.364744 ನ್ನು ಅವರಿಗೆ ನೀಡಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:3: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ಅವರು ಸದರಿ ಚೆಕ್ಕನ್ನು ಪಿರ್ಯಾದುದಾರರು ದಿನಾಂಕ 09.07.2024 ರಂದು ತಮ್ಮ ಬಾಬ್ತು ಕೆನರಾ ಬ್ಯಾಂಕ್, ಟಿ.ನರಸೀಪುರ ಶಾಖೆಯ ಖಾತೆಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, '**ಸಾಕಷ್ಟು ಹಣ ಇರುವುದಿಲ್ಲ (Funds Insufficient)'** ಎಂಬ ಮಾಹಿತಿಯೊಂದಿಗೆ ಚೆಕ್ ಅಮಾನ್ಯಗೊಂಡು ದಿನಾಂಕ 10.07.2024 ರಂದು ಸದರಿ ಚೆಕ್ಕು ವಾಪಸ್ಸು ಬಂದಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:4: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ನಂತರ ದಿನಾಂಕ 23.07.2024 ರಂದು ನಿಮಗೆ ವಕೀಲರ ಮುಖಾಂತರ ನೋಟೀಸು ಕಳಿಸಿ ಸಾಲದ ಹಣವನ್ನು ಮರುಪಾವತಿ ಮಾಡಬೇಕೆಂದು ಕೇಳಿದ್ದು, ಆದರೆ ನೀವು ಇದುವರೆಗೂ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎನ್ನುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:5:ಈ ಪ್ರಕರಣದ ವಿಚಾರವಾಗಿ ಏನಾದರೂ ಹೇಳುವುದು ಇದೆಯೆ?

ಉಃ

ಪ್ರ:6:ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀರಾ?

ಉಃ

**[ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ಅವರಿಗೆ ಓದಿ ಹೇಳಿದ ನಂತರ ಉತ್ತರಗಳನ್ನು ಅವರು ಹೇಳಿದಂತೆ ದಾಖಲಿಸಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.]**

ದಿನಾಂಕಃ 05.11.2024.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
***ಟಿ.ನರಸೀಪುರ. *****